ಅ) ರಾಜ್ಯದಲ್ಲಿ ಕೃಷಿಯಲ್ಲಿ ಸಾಕಷ್ಟು ಬದಲಾವಣೆ ತರಲು ಕರಡು ಕೃಷಿ ನೀತಿ ರೂಪಿಸಿದ್ದು ಇದಕ್ಕೆ ಸರ್ಕಾರದಿಂದ ಯಾವಾಗ ಒಪ್ಪಿಗೆ ದೊರಕುವುದು;

ಆ) ಹೊಸ ಕೃಷಿ ನೀತಿಯಿಂದ ರೈತರಿಗೆ ಆಗುವ ಲಾಭಗಳೇನು;

ಇ) ಕೃಷಿ ಇಲಾಖೆಯಿಂದ ರೈತರಿಗೆ ಪ್ರತಿವರ್ಷ ಎಷ್ಟು ಹಣವನ್ನು ಸಬ್ಸಿಡಿಯಾಗಿ ಕೊಡಲಾಗುವುದು (ಜಿಲ್ಲಾವಾರು ವಿವರ ಕೊಡುವುದು).

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಕರಡು ಕೃಷಿ ನೀತಿಗೆ ರಾಜ್ಯ ಸಚಿವ ಸಂಪುಟವು ಈಗಾಗಲೇ ಒಪ್ಪಿಗೆ ನೀಡಿದೆ. ಈ ಕೃಷಿ ನೀತಿಯ ಬಗ್ಗೆ ಮಾನ್ಯ ಸದಸ್ಯರುಗಳು ಅಭಿಪ್ರಾಯ ಸಲಹೆ ಸೂಚನೆಗಳನ್ನು ಪಡೆಯುವ ಸಲುವಾಗಿ ಇದರ ಪ್ರತಿಯನ್ನು ವಿಧಾನಮಂಡಲದ ಎರಡೂ ಸದನಗಳಲ್ಲಿ ಮಂಡಿಸಲಾಗಿದ್ದು ಈಗಾಗಲೇ ಇದರ ಬಗ್ಗೆ ಸದನದಲ್ಲೂ ಸಹ ಚರ್ಚೆಯನ್ನು ನಿರೀಕ್ಷಿಸಲಾಗಿದೆ.

ಆ) ಈ ಹೊಸ ಕೃಷಿ ನೀತಿಯಿಂದ ರೈತ ಸಮುದಾಯಕ್ಕೆ ಕೆಳಕಂಡ ಕೆಲವು ಲಾಭಗಳು ದೊರೆಯಬಹುದೆಂದು ಅಂದಾಜು ಮಾಡಲಾಗಿದೆ.

1. ಕೃಷಿಗೆ ಕೈಗಾರಿಕಾ ನೀತಿ ಅನ್ವಯದ ಸಾಧ್ಯತೆ

2. ಕೃಷಿ ಉದ್ಯಮಕ್ಕೆ ಖಾಸಗೀ ಕ್ಷೇತ್ರದಿಂದ ಬಂಡವಾಳ ಹೂಡಿಕೆ ಸಾಧ್ಯತೆ.

3. ಕೃಷಿ ಕ್ಷೇತ್ರಕ್ಕೆ ಸಾಲ ಒದಗಿಸುವ ಸಲುವಾಗಿ ಪ್ರತ್ಯೇಕವಾದ ಒಂದು ಕೃಷಿ ಫೈನಾನಷಿಯಲ್ ಕಾರ್ಪೊರೇಷನ್ ರಚನೆ.

4. ನೀರಾವರಿ ಕ್ಷೇತ್ರದ ಸುಧಾರಣೆ.

5. ಒಣ ಭೂಮಿ ಬೇಸಾಯ ಪದ್ಧತಿಯ ಸುಧಾರಣೆ.

6. ಬೆಲೆ ಮತ್ತು ಮಾರುಕಟ್ಟೆಗಳ ಸುಧಾರಣೆ.

7. ಸಂಶೋಧನೆ, ತಾಂತ್ರಿಕತೆ ಹಾಗೂ ಕೃಷಿ ವಿಸ್ತರಣೆ ಇವುಗಳಿಗೆ ಪುನಶ್ಚೇತನ ನೀಡಿಕೆ.

ಇ) ನೂತನ ಕೃಷಿ ನೀತಿಯಲ್ಲಿ ಎಷ್ಟು ಹಣವನ್ನು ಸಬ್ಸಿಡಿಯಾಗಿ ನೀಡಲಾಗುವುದು ಎಂಬ ಬಗ್ಗೆ ವಿವರಗಳನ್ನು ಈಗಲೇ ಹೇಳಲು ಸಾಧ್ಯವಿಲ್ಲ.

ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲು ಬಂದಿರುವ ಅರ್ಜಿಗಳ ಸಂಖ್ಯೆ

2008 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲು ಬಂದಿರುವ ಅರ್ಜಿಗಳು ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು).

ಆ) ಈ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ;

ಇ) ಅಕ್ರಮ ಸಾಗುವಳಿಗೆ ಒಳಗಾಗಿರುವ ಒಟ್ಟು ಭೂಮಿ ಎಷ್ಟು;

ಈ) ಇದರಲ್ಲಿ ಈಗಾಗಲೇ ಹಂಚಿಕೆಯಾಗಿರುವ ಭೂಮಿ ಎಷ್ಟು;

ಉ) ಉಳಿದಿರುವ ಅರ್ಜಿಗಳನ್ನು ಕಾಲಮಿತಿಗೊಳಪಟ್ಟು ನಿರ್ಣಯ ಮಾಡಲು ಸರಕಾರ ಪರಿಶೀಲಿಸುತ್ತಿದೆಯೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಒಟ್ಟು 10,36,826 ಅರ್ಜಿಗಳು (ತಾಲ್ಲೂಕುವಾರು ವಿವರ ಲಭ್ಯವಿರುವುದಿಲ್ಲ. ಜಿಲ್ಲಾವಾರು ವಿವರ ಅನುಬಂಧದಲ್ಲಿ ಲಗತ್ತಿಸಿದೆ.)

ಆ) 6,25,425 ಅರ್ಜಿಗಳು.

ಇ) ಒಟ್ಟು 25,80,214 ಏಕರೆಗಳು (ತಾಲ್ಲೂಕುವಾರು ವಿವರ ಲಭ್ಯವಿರುವುದಿಲ್ಲ. ಜಿಲ್ಲಾವಾರು ವಿವರ ಲಗತ್ತಿಸಿದೆ)

ಈ) 3,85,303 ಏಕರೆಗಳು.

ಉ) ಆದಷ್ಟು ಬೇಗ ಅರ್ಜಿಗಳನ್ನು ವಿಲೇ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕೃಷಿ ಸಹಾಯಕರ ಕೊರತೆ

2010 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ಕೃಷಿ ಸಹಾಯಕರ ಹುದ್ದೆಗಳು ಎಷ್ಟು?

ಆ) ಕುಂದಾಪುರ ತಾಲ್ಲೂಕಿನಲ್ಲಿ ಖಾಲಿ ಕೃಷಿ ಸಹಾಯಕರ ಹುದ್ದೆ ಎಷ್ಟು?

ಇ) ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) 1027.

ಆ) 4.

ಇ) ಸರ್ಕಾರದ ಆದೇಶ ಸಂಖ್ಯೆ: ಎಹೆಚಡಿ 278 ಎಎಂಎಲ್ 95 ದಿನಾಂಕ: 31.5.95ರಂತೆ ಎರಡು ಖಾಲಿ ಕೃಷಿ ಸಹಾಯಕರ ಹುದ್ದೆಗಳಿಗೆ ಬದಲಾಗಿ ಒಬ್ಬ ಕೃಷಿ ಪದವೀಧರರನ್ನು ಸಹಾಯಕ ಕೃಷಿ ಅಧಿಕಾರಿಯಾಗಿ ನೇಮಕಾತಿ ಮಾಡಿಕೊಳ್ಳಲಾಗುವುದೆಂಬ ಆದೇಶವಿರುತ್ತದೆ. ಆದುದರಿಂದ ಇನ್ನು ಮುಂದೆ ಕೃಷಿ ಸಹಾಯಕರನ್ನು ನೇಮಕಾತಿ ಮಾಡಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.